# ವಾರ್ಡ್ ಸಭೆ ಸಂಖ್ಯೆ.48

ದಿನಾಂಕ:17.12.2022 ರಂದು ಸಮಯ 11:30 ಗಂಟೆಗೆ ವಾರ್ಡ್.ಸಂಖ್ಯೆ.50 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಕಾರ್ಯದರ್ಶಿಗಳು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಎಸ್.ಆರ್ ಶ್ರೀನಿವಾಸ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.50, ಮಾರಪ್ಪನಪಾಳ್ಯ. **(ಅಧ್ಯಕ್ಷರು)**
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.50, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
3. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
4. ಶ್ರೀ ಓಂಪ್ರಕಾಶ್ ತೋಟಗಾರಿಕೆ ಅಧೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
5. ಶ್ರೀ. ಬಿ.ಆರ್. ಪುಟ್ಟಸ್ವಾಮಿ, ಸದಸ್ಯರು
6. ಶ್ರೀ ಶ್ರೀನಿವಾಸ ಗೌಡ, ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ.
7. ಶ್ರೀ ರಾಜೇಶ್. ಸದಸ್ಯರು.
8. ಶ್ರೀ. ಗೋಪಿ, ಸದಸ್ಯರು
9. ಶ್ರೀ. ಛಾಯಾಪತಿ ಎಂ. ಕಿರಿಯ ಆರೋಗ್ಯ ಪರಿವೀಕ್ಷಕರು, ಬಿಬಿಎಂಪಿ
10. ಶ್ರೀ. ಡಾ.ನಾಗೇಂದ್ರ, ನಂಜುಂಡೇಶ್ವರನಗರ
11. ಶ್ರೀ ವೈ.ಆರ್. ವೆಂಕಟೇಶ್ ಸದಸ್ಯರು,
12. ಶ್ರೀ ದಿನೇಶ್ ಕುಮಾರ್ ಸ.ಅ. (ಬೆಸ್ಕಾಂ)
13. ಶ್ರೀ ಲೋಕೇಶ್ ಪಶುಸಂಗೋಪನ ಪರಿವೀಕ್ಷರು,

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 01 | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 02 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 03 | ವಿಜಯಾನಂದನಗರ ಮುಖ್ಯರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಇರುವ ಮನೆಗೆ ನೀರಿನ ಬಿಲ್ಲು ಹೆಚ್ಚಾಗಿ ಬಂದಿರುವುದರಿಂದ ಕಾರಣವೇನು ಎಂಬುದಕ್ಕೆ ಮಾಹಿತಿ ನೀಡಲು ಡಾ॥ ನಾಗೇಂದ್ರ ಕೋರಿರುತ್ತಾರೆ. ಇದರ ಬಗ್ಗೆ ಶ್ರೀ.ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಮುಂದಿನ ಸಭೆಗೆ ಸದರಿ ವಿಷಯದ ಬಗ್ಗೆ ವಿಸ್ತೃತವಾದ ವರದಿಯನ್ನು ಸಲ್ಲಿಸಲಾಗುವುದು ಎಂದು ಸಭೆಗೆ ತಿಳಿಸಿದರು. | ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು |
| 04 | ಕಣ್ವ ಆಸ್ಪಿಟಲ್ ರಸ್ತೆ ಮತ್ತು ಟಯೋಟಾ ಶೋ ರೂಂ ರಸ್ತೆಗಳಲ್ಲಿ ವಾಹನಗಳನ್ನು ರಸ್ತೆಯ ಬದಿಯಲ್ಲಿಯೆ ನಿಲ್ಲಿಸಿರುವುವುದನ್ನು ತೆರವುಗೊಳಿಲು ಸಭೆಗೆ ಡಾ॥ನಾಗೇಂದ್ರರವರು ಮತ್ತು ಸಾರ್ವಜನಿಕರು ಕೋರಿದರು. ಅದಕ್ಕೆ ಸಂಬಧಪಟ್ಟ ಪೋಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು | ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆ ಅಧಿಕಾರಿಗಳು ಮುಂಬರುವ ಸಭೆಗೆ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. |
| 05 | ಸಂಚಾರಿ ಪೋಲೀಸ್ ಠಾಣೆ ಯಶವಂತಪುರರವರಿಗೆ ಕಿಯಾ ಮೋಟರ್ಸ್ ಬಳಿ ನೋ–ಪಾರ್ಕಿಂಗ್ ಬೋರ್ಡ್ ಅಳವಡಿಸಲು ಎಲಿನಾ ವಸತಿ ಗೃಹದ ನಿವಾಸಿಗಳು ಕೋರಿರುತ್ತಾರೆ | ಯಶವಂತಪುರ ಸಂಚಾರಿ ಪೋಲೀಸ್ ಠಾಣೆ |
| 06 | ಕಸ ನಿರ್ವಹಣೆ ಮತ್ತು ಬ್ಲಾಕ್ ಸ್ಪಟ್ ತೆರವು ಕಾರ್ಯಚರಣೆ ಮತ್ತು ಶಂಕರನಗರ ಮುಖ್ಯರಸ್ತೆ ಹಾಗೂ ಉಲ್ಲಾಸ್ ರಸ್ತೆ ಬದಿಯ ವ್ಯಾಪಾರಿಗಳು ಮಧ್ಯರಾತ್ರಿಯಲ್ಲಿ ಕೂಗಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ, ವಿದ್ಯಾರ್ಥಿಗಳಿಗೆ, ಚಿಕ್ಕಮಕ್ಕಳಿಗೆ ನಿದ್ರಾಭಂಗವಾಗುತ್ತಿರುವುದರಿಂದ ಸದರಿ ಮಾರುಕಟ್ಟೆಯ ವ್ಯವಸ್ಥೆಯನ್ನು ಸ್ಥಳಾಂತರಿಸಲು ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳು ಒಕ್ಕೊರಲಾಗಿ ಕೋರಿರುತ್ತಾರೆ. | ಆರೋಗ್ಯ ಇಲಾಖಗೆ ಬ್ಲಾಕ್ ಸ್ಪಟ್ ತೆರುವುಗೆ ಯೋಜನೆ ರೂಪಿಸಲು ಸಲಹೆ ನೀಡಲಾಗಿದೆ |

| | | |
|---|---|---|
| 07 | ಲಾರಿ ಸ್ಟ್ಯಾಂಡ್ ರಸ್ತೆಯ ನಂಜುಂಡೇಶ್ವರ ಹೆಬ್ಬಾಗಿಲು ಬಳಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಪೈಪ್ ಲೈನ್ ಎತ್ತರವಾಗಿರುತ್ತದೆ, ಇದರಿಂದ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಓಡಾಡುವ ಸಮಯದಲ್ಲಿ ಹಾನಿ ಉಂಟುಮಾಡುವ ಸಾದ್ಯತೆ ಇರುವುದರಿಂದ ಸದರಿ ಕೊಳವೆಯನ್ನು ದುರಸ್ಥಿಗೊಳಿಸಲು ಡಾ:ನಾಗೇಂದ್ರ ರವರು ಸಭೆಗೆ ಕೋರಿರುತ್ತಾರೆ. | ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು |
| 08 | ಶಂಕರನಗರ ಮುಖ್ಯರಸ್ತೆ ಅಶೋಕ ಹೈಟ್ಸ್ ಬಳಿ ಇರುವ ಬೆಸ್ಕಂ ಟ್ರಾನ್ಸ್‌ಫರಂನ್ನು ಸ್ಥಳಾಂತರಿಸಲು ಡಾ॥ನಾಗೇಂದ್ರರವರು ಕೋರಿರುತ್ತಾರೆ. | ಬೆಸ್ಕಂ ಅಧಿಕಾರಿಗಳು ಮುಂಬರುವ ಸಭೆಗೆ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. |
| 09 | ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆ ಬಗ್ಗೆ ಮಾಹಿತಿಯನ್ನು ಡಾ॥ನಾಗೇಂದ್ರ ರವರು ಸಭೆಗೆ ಕೋರಿರುತ್ತಾರೆ. | ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮುಂಬರುವ ಸಭೆಗೆ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. |
| 10 | ವಾರ್ಡ್ ನಂ50. ಮಾರಪ್ಪನ ಪಾಳ್ಯದಲ್ಲಿರುವ ಮಾರ್ಷಗಳಿಗೆ ಶಾಶ್ವತವಾಗಿ ಒಂದು ಮೋಬೈಲ್‌ನ್ನು ಒದಾಗಿಸಿ ಕೋಡಲು ಸಭೆಯಲ್ಲಿ ಚರ್ಚಿಸಿ ಸಂಬಂಧಪಟ್ಟ ಅಧಿಕರಿಗಳಿಗೆ (ಎಸ್.ಡಬ್ಲ್ಯೂ. ಎಮ್.) ರವರಿಗೆ ಮನವಿ ಮಾಡಿರುತ್ತಾರೆ. | ಆರೋಗ್ಯ ಇಲಾಖೆ |
| 11 | ನಂಜುಂಡೇಶ್ವರ ನಗರ 1ನೇ ಮುಖ್ಯ ರಸ್ತೆಯ ಮನೆಪಕ್ಕದಲ್ಲಿರುವ ಒಣಗಿದ ಮರವನ್ನು ತೆರವುಗೊಳಿಸಲು ಸಭೆಯಲ್ಲಿ ಕೋರಿದೆ. | ತೋಟಗಾರಿಕೆ ಇಲಾಖೆ |
| 12 | ಶಂಕರನಗರ ಮುಖ್ಯ ರಸ್ತೆಯಲ್ಲಿರುವ ಮನೆಗಳು ಕಮರ್ಷಿಯಲ್ ಆಗಿರುವುದಕ್ಕೆ ಕಂದಾಯದ ಬಗ್ಗೆ ಪರೀಶಿಲಿಸಲು ಸಭೆಯಲ್ಲಿ ಸಭಾಸದ್ಯಸ್ಯರು ಕೋರಿರುತ್ತಾರೆ. | ಕಂದಾಯ ಇಲಾಖೆ |
| 13 | ಕಾರ್ಯದರ್ಶಿಗಳು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನಗಳನ್ನು ಹೇಳುತ್ತ ಸಭೆಯನ್ನು ಮುಕ್ತಾಯಗೊಳಿಸಿದರು. | – |

17/12/22

**ನೋಡಲ್ ಅಧಿಕಾರಿ**
ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.50
ಮಾರಪ್ಪನಪಾಳ್ಯ